ಅಪ್ಪಿ–ತಪ್ಪಿ ಕಣ್ಣು ಹತ್ತಿದರೂ ಭಯಂಕರ ಕನಸು ಬೀಳುತ್ತದೆ. ಇಲ್ಲದೇ ಹೋದರೆ ದರಿದ್ರ ಫೋನು ಕಾಡುತ್ತದೆ.

'ಹಲೋ, ಹಾಂ ಬೋಲ್ ಬೋಟಾ... ಏನಂದೆ? ಮತ್ತೆ? ಹೀಗೆಲ್ಲ ಮಾತಾಡಬೇಡ ಬೇಟಾ. ನಾವು ಸುಸಂಸ್ಕೃತ ಜನ. ಅವನು ಬೇವಕೂಫ್. ಅಜ್ಞಾನಿಯಾಗಿದ್ದಾನೆ. ಹೌದೌದು. ನಮ್ಮ ರಕ್ತದವರು. ಅದಕ್ಕೇ ಹೇಳಿದ್ದು ಲಕ್ಷ್ಯ ಕೊಡಬೇಡವೆಂದು. ಉಸಕಿ ಔಕಾತ್ ನಹೀ ಇತನಿ. ನಮ್ಮ ದಂಧೆಯಲ್ಲಿ ತಲೆಯ ಮೇಲೆ ಹಿಮಗಡ್ಡೆ ಇಟ್ಟುಕೊಂಡು ಕೆಲಸ ಮಾಡಬೇಕಾಗುತ್ತದೆ. ನೀನು ಶಾಂತನಾಗು, ಮೊದಲು ಶಾಂತನಾಗು.' ಮಧ್ಯಾಹ್ನ ನಿದ್ದೆ ಬರುವುದಿಲ್ಲ. ಒಮ್ಮೊಮ್ಮೆ ತಲೆಯನ್ನು ಬದಿಗೆ ತೆಗೆದಿರಿಸಿ ಶಾಂತವಾಗಿ ಮಲಗಿ ಬಿಡಬೇಕೆಂದೆನಿಸುತ್ತದೆ. ಭಾಡ್ ಮೆ ಜಾನೇ ದೋ ದುನಿಯಾಕೋ. ಆದರೆ, ತಲೆಯನ್ನು ತೆಗೆದಿರಿಸಲು ಇಲ್ಲೆಲ್ಲಿ ಜಾಗವಿದೆ? ತಲೆ ಸಹಿತ ಮಲಗಬೇಕೆಂದರೆ ಕನಸು ಬೀಳುತ್ತದೆ. ನಿನ್ನೆಯದೇ ಘಟನೆ. ಸ್ವಲ್ಪ ನಿದ್ದೆ ಹತ್ತಿರಬೇಕು, ಆಳವಾದ ಕತ್ತಲೆಯ ಬಾವಿಯೊಳಗೆ ನಾನೇನೋ ಹುಡುಕುತ್ತಿರುವಂತೆ ಕಾಣತೊಡಗಿತು ಮತ್ತು ಬಾವಿಯ ಅಂಚಿಗೆ ನಿಂತ ನನ್ನ ಇಬ್ಬರು ಮಕ್ಕಳು ಜೋರು ಜೋರಾಗಿ ಬಯ್ದು, ಮೇಲೆ ಬರುವಂತೆ ಕಿರುಚುತ್ತಿದ್ದಾರೆ. ಫೋನಿನಲ್ಲಿ ಮಾತಾಡುತ್ತಿದ್ದನಲ್ಲ, ಅವನು ನಮ್ಮ ಹಿರಿಯ ಮಗ, ಅವನು ಮತ್ತು ಅವನ ಹಿಂದಿದ್ದವನು, ಇಬ್ಬರ ಕೈಯಲ್ಲೂ ಖಡ್ಗವಿದೆ ಮತ್ತು ಜೋರಾಗಿ ಕಿರುಚುತ್ತಿದ್ದಾರೆ. ನಾನು ಗಕ್ಕನೆ ಎದ್ದು ಕುಳಿತೆ ಮತ್ತು ಯೋಚಿಸಲಾರಂಭಿಸಿದೆ. ಬಾವಿಯಲ್ಲಿ ನಾನು ಏನು ಹುಡುಕುತ್ತಿದ್ದೆ? ನನ್ನ ಮಕ್ಕಳು ನನ್ನನ್ನು ಬಯ್ಯುತ್ತಿದ್ದಾರೆಯೇ? ಸುಳ್ಳು, ತೀರ ಸುಳ್ಳು. ನೀವು ನನ್ನ ಮಕ್ಕಳನ್ನು ನೋಡಿರಲಿಕ್ಕಿಲ್ಲ. ಮೊಲವೆಂದರೆ ಪಕ್ಕಾ ಮೊಲ. ಅತ್ಯಂತ ಸಜ್ಜನರು ಮತ್ತು ಮಾತು ತೀರ ಮಧುರ. ಅವರ ಇಡೀ ಆಯುಷ್ಯದಲ್ಲಿ ಒಂದು ಬಯ್ಗುಳ ಶಬ್ದವೂ ಹೊರಬಿದ್ದಿಲ್ಲ. ಹಾಂ. ನನ್ನ ಕಿರಿಯ ಮಗನ ಬಾಯಿ ಮಾತ್ರ ಗಟಾರು. ಬಾಯಿಗೆ ಬಂದಂತೆ ಮಾತಾಡುತ್ತಾನೆ. ಆದರೆ, ಅವನು ಬಾವಿಯ ದಂಡೆಯಲ್ಲಿರಲಿಲ್ಲ. ಹಿರಿಯವನು ಮತ್ತು ಮಧ್ಯದವನು ಇದ್ದ. ಆಯುಷ್ಯದಲ್ಲಿ ಅವರೊಂದು ಚಾಕುವಾಗಲಿ ಖಡ್ಗವಾಗಲಿ ಎಂದೂ ಕೈಯಲ್ಲಿ ಹಿಡಿದಿರಲಿಲ್ಲ. ಇಲ್ಲ, ಇದು ಸಾಧ್ಯವೇ ಇಲ್ಲ. ಆದರೆ, ಈಗಷ್ಟೇ ನಡೆದು ಹೋಗಿದೆ ಎಂದೆನಿಸುತ್ತದೆ.

ಇನ್‌ಶಾರ್ಟ್‌ನ ಮೈ ಸೋತಾ ನಹೀ. ಸುಮ್ಮನೆ ಕುಳಿತು ಬೀಡಿ ಸೇದುತ್ತಿರುತ್ತೇನೆ, ಸಾಮಾನುಗಳ ಮೇಲಿನ ಧೂಳು ಒರೆಸುತ್ತೇನೆ. ಮತ್ತೆ ಕೂರುತ್ತೇನೆ ಮತ್ತೆ ಧೂಳು ಝಾಡಿಸುತ್ತೇನೆ. ಬೀಡಿ ಸೇದುತ್ತೇನೆ. ಮತ್ತೆ ಧೂಳು ಝಾಡಿಸುವುದು. ಸಾಮಾನುಗಳ ಮೇಲೆ ಧೂಳು ಕೂತಿರಬಾರದು. ಗುಜರಿ ಮಾಲು ಇದ್ದರೇನಾಯಿತು. ನೋಡಲು ಸ್ವಚ್ಛವಾಗಿ ಕಾಣಿಸಬೇಕು. ಮತ್ತೆ ಫೋನು. "ಸಾಕು ಮಾಡ್ರೋ ಮಾರಾಯಾ! ಅಪ್ಪನಿಗೆ ಒಂದೆರಡು ಗಳಿಗೆಯಾದರೂ ಆರಾಮ ಮಾಡಲು ಬಿಡಿರೋ. ಈ ವಯಸ್ಸಿನಲ್ಲಿ ಹೆಚ್ಚು ತ್ರಾಸು ಕೊಡಬೇಡಿರೋ. ಹೋಗು, ಫೋನು ಎತ್ತುವುದಿಲ್ಲ" ಎರಡು ದಿನಗಳಿಂದ ಈ ಮಕ್ಕಳು ಹೈರಾಣುಗೊಳಿಸಿದರು. ತುಂಬ ಚೆನ್ನಾಗಿದೆ ಸ್ವಭಾವ. ಆದರೆ, ಇವರನ್ನು ಈ ಕಿರಿಯ ಪೀಡಿಸುತ್ತಾನೆ. ಹರಾಮಿ, ನನ್ನೆದುರಿಗೆ ಬಂದಿದ್ದರೆ, ಎರಡು ಬಾರಿಸಿಯೇ ಬಿಡುತ್ತಿದ್ದೆ ಕೆನ್ನೆಗೆ. ಒಳಗಿನ ಖೋಲಿಯಲ್ಲಿ ಕೂಡಿ ಹಾಕಿಬಿಡುತ್ತೇನೆ ಅಥವಾ ಈ ಫೋನ್ ಮಾರಿಬಿಡುತ್ತೇನೆ. ಒಳ್ಳೆ ಬೆಲೆಯೂ ಬರಬಹುದು. ಇಲ್ಲಿಯ ಪ್ರತಿಯೊಂದು ವಸ್ತುವಿಗೆ ಒಳ್ಳೆಯ ಬೆಲೆ ಬರುತ್ತದೆ. ಈ ಫೋನು ನನ್ನ ಅಪ್ಪನಿಗೆ, ಬಾಬೂಜಿಗೆ ಒಬ್ಬ ಸಟ್ಟಾವಾಲಾ ತಂದುಕೊಟ್ಟ. ಅವನ ಅಪ್ಪ ಅದನ್ನು ಒಬ್ಬ ಬ್ರಿಟಿಷ್ ಅಧಿಕಾರಿಯ ಮನೆಯಿಂದ ಹೊಡೆದುಕೊಂಡ. ಈ ಗಡಿಯಾರ ನಾನೆಲ್ಲಿಂದ ಹೊಡೆದೆ ಗೊತ್ತೇ? ಮೊದಲ ರಾಷ್ಟ್ರಪತಿ ಬಾಬೂ ರಾಜೇಂದ್ರರ ಕಚೇರಿಯಿಂದ. ರಾಷ್ಟ್ರಪತಿ ಭವನ ರಿನೋವೇಶನ್ ಮಾಡುತ್ತಿರುವಾಗ ಸಾಕಷ್ಟು ಸಾಮಾನುಗಳು ಸಿಕ್ಕವು. ನಾನು ಗಡಿಯಾರ ಎತ್ತಿಕೊಂಡೆ. ಈ ನಗರದ ಕಾರಖಾನೆಗಳು ಮುಚ್ಚಿ ಹೋದಾಗ ಮಿಶನರಿಗಳೆಲ್ಲ, ಸ್ಪೇರ್‌ಪಾರ್ಟ್‌ಗಳೆಲ್ಲ ನನ್ನ